**ಡಿ.ಡಬ್ಲ್ಯು-01 – ನಿರಂಜನ್ ಕಟ್ಟಿ**

**ಸಾಕ್ಷಿಯನ್ನು ದಿನಾಂಕಃ 27.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ಅಗಸನಹುಂಡಿ ಸ.ನಂ. 6 ರಲ್ಲಿ ಒಟ್ಟು 448.17 ಎಕರೆ ಜಮೀನು ಇರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಅದರಲ್ಲಿ 212.18 ಎಕರೆ ಜಮೀನು ಅರಣ್ಯ ಇಲಾಖೆಗೆ ಸೇರಿರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ 212.18 ಎಕರೆ ಜಮೀನನ್ನು ಬಿಟ್ಟು ಉಳಿದ ಜಮೀನು ಕಂದಾಯ ಇಲಾಖೆಗೆ ಸೇರಿದ ಜಮೀನು ಆಗಿರುತ್ತದೆಂದರೆ ಸರಿ. ಸದರಿ ಉಳಿಕೆ ಜಮೀನಿನಲ್ಲಿ ಕಂದಾಯ ಇಲಾಖೆಯವರು ಹಲವು ಜನರಿಗೆ ಸಾಗುವಳಿ ಪತ್ರ ವಿತರಿಸಿ ಜಮೀನು ಮಂಜೂರು ಮಾಡಿರುತ್ತಾರೆ ಹಾಗು ಮಂಜೂರಾತಿ ಆದೇಶದ ಮೂಲಕ ಜಮೀನು ಪಡೆದ ಜನರು ಅದರಲ್ಲಿ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಸ.ನಂ. 6 ರಲ್ಲಿ 212.18 ಎಕರೆ ಜಮೀನು ಅರಣ್ಯ ಇಲಾಖೆಗೆ ಸೇರಿರುವ ಬಗ್ಗೆ 1993 ನೇ ಇಸವಿಯಲ್ಲಿ ಸರ್ಕಾರದಿಂದ ನೋಟಿಫಿಕೇಷನ್ ಆಗಿರುತ್ತದೆ. ಸಾಕ್ಷಿ ಮುಂದುವರೆದು ಆ ರೀತಿ ನೋಟಿಫಿಕೇಷನ್ ಆದ ನಂತರ ಸದರಿ ವಿಸ್ತೀರ್ಣದ ಜಮೀನನ್ನು ನಮ್ಮ ಇಲಾಖೆಯಿಂದ ಆನೆ ಕಂದಕ (ಟ್ರೆಂಚ್) ಮಾಡಿಸಿ ಗುರುತಿಸಿಕೊಂಡಿರುತ್ತೇವೆಂದು ನುಡಿಯುತ್ತಾರೆ. ಸದರಿ ಜಮೀನು ಹಿಂದೆ 1927 ರಲ್ಲಿ ಸರ್ಕಾರ ಹೊರಡಿಸಿದ ನೋಟಿಫಿಕೇಷನ್ ನಲ್ಲಿ ಅದು ಅರಣ್ಯ ಇಲಾಖೆಗೆ ಸೇರಿದ್ದು ಅದು ಸಿದ್ದಾಪುರ ಬ್ಲಾಕ್ ಎಂದು ನಮೂದಾಗಿರುತ್ತದೆ. ಸಾಕ್ಷಿ ಮುಂದುವರೆದು ಸದರಿ ಬ್ಲಾಕ್ ನಲ್ಲಿ 1450 ಹೆಕ್ಟೇರ್ ಜಮೀನು ಎಂದು ನಮೂದಾಗಿರುತ್ತದೆಂದು ನುಡಿಯುತ್ತಾರೆ. ಸದರಿ ಜಮೀನನ್ನು ಹೊರತುಪಡಿಸಿ ಉಳಿಕೆ ಕಂದಾಯ ಇಲಾಖೆಗೆ ಸೇರಿದ ಜಮೀನನ್ನು ಅರಣ್ಯ ಇಲಾಖೆ

ಪಡೆದುಕೊಂಡಿರುವುದಿಲ್ಲವೆಂದರೆ ಸರಿ. ಸದರಿ ಜಮೀನಿಗೆ ಆನೆ ಹಾವಳಿ ತಪ್ಪಿಸುವ ಸಲುವಾಗಿ 2019 ನೇ ಇಸವಿಯಲ್ಲಿ ರೈಲ್ವೇ ಬ್ಯಾರಿಕೇಡ್ ಹಾಕಿಸಿರುತ್ತೇವೆ. ದಾವಾ ಆಸ್ತಿಯ ಪಶ್ಚಿಮ ಹಾಗು ದಕ್ಷಿಣ ದಿಕ್ಕಿನಲ್ಲಿ ನಮ್ಮ ಅರಣ್ಯ ಇಲಾಖೆಗೆ ಸೇರಿದ ಜಮೀನು / ಅರಣ್ಯ ಇರುತ್ತದೆಂದರೆ ಸರಿ. ನಾನು ಈ ದಾವೆಯಲ್ಲಿ ಯಾವುದೇ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ನನ್ನ ಹಿಂದಿನ ಅಧಿಕಾರಿಗಳು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ದಾವಾ ಪತ್ರ ತಿದ್ದುಪಡಿಯಾದ ನಂತರ ಹೆಚ್ಚುವರಿ ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆಂದರೆ ಸರಿ. ಹಿಂದೆ ನಮ್ಮ ಇಲಾಖೆಯಿಂದ ಆನೆ ಕಂದಕ ಮಾಡಿದ ಜಾಗವನ್ನು ಬಿಟ್ಟು ವಾದಿಯ ದಾವಾ ಆಸ್ತಿಯ ಮಧ್ಯೆ ಆನೆ ಕಂದಕ ಮಾಡಲು ಪ್ರಯತ್ನಿಸಿರುತ್ತೇವೆಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮ ಹಾಗು ದಕ್ಷಿಣ ದಿಕ್ಕಿಗೆ ಅರಣ್ಯ ಇದ್ದು ಅದರ ಮಧ್ಯದಲ್ಲಿ ಕಂದಾಯ ಇಲಾಖೆಗೆ ಸೇರಿದ ಜಮೀನು ಇರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಉತ್ತರದಲ್ಲಿ ಮಾತ್ರ ಇರುತ್ತದೆಂದು ನುಡಿಯುತ್ತಾರೆ. ನಾನು ನಿ.ಡಿ.-5 ರಲ್ಲಿ ತಿಳಿಸಿರುವಂತೆ ಜವರಯ್ಯ, ತಮ್ಮಯ್ಯ, ದಾಸಯ್ಯ ಹಾಗು ಪುಟ್ಟಯ್ಯರವರಿಗೆ 1977-1978 ನೇ ಇಸವಿಯಲ್ಲಿ ತಲಾ 04 ಎಕರೆ ಜಮೀನು ಮಂಜೂರಾಗಿರುವ ವಿಚಾರ ತಿಳಿಸಿದ್ದು ಸದರಿ ವಿಚಾರ ನಮಗೆ 1977-1978 ನೇ ಇಸವಿಯಲ್ಲಿಯೇ ಗಮನದಲ್ಲಿದ್ದಿರುತ್ತದೆಂದರೆ ಸರಿಯಲ್ಲ. ಸದರಿ ವಿಚಾರ ತಿಳಿದ ನಂತರ ಸಂಬಂಧಿಸಿದ ಇಲಾಖೆಗೆ ಪತ್ರ ಬರೆದಿರುತ್ತೇವೆ. ಸದರಿ ನಿ.ಡಿ.-5 ಪತ್ರದಲ್ಲಿ ಜವರಯ್ಯರವರು 1990 ರಲ್ಲಿಯೇ ಮೃತರಾಗಿರುವುದಾಗಿ ತಿಳಿಸಿರುತ್ತೇವೆ. ಸಾಕ್ಷಿ ಮುಂದುವರೆದು ಆ ಬಗ್ಗೆ ಅವರ ಮರಣ ಪ್ರಮಾಣ ಪತ್ರವನ್ನು ಸಹ ಹಾಜರುಪಡಿಸಿರುತ್ತೇವೆಂದು ನುಡಿಯುತ್ತಾರೆ. ಅದೇ ರೀತಿ ಸದರಿ ಜವರಯ್ಯರವರು

ಅಗಸನಹುಂಡಿ ಗ್ರಾಮವನ್ನು ಬಿಟ್ಟ ನಂತರ ಅವರ ವಾರಸುದಾರರು ಹಾಗು ದಾಸಯ್ಯರವರು ನಂಜನಗೂಡು ತಾಲ್ಲೋಕಿನ ಹುಲ್ಲಹಳ್ಳಿಯ ರಾಮಾಪುರ ಗ್ರಾಮದಲ್ಲಿ ವಾಸವಿರುವುದಾಗಿ ನಿ.ಡಿ.–5 ರಲ್ಲಿ ನಮೂದಿಸಿರುತ್ತೇವೆಂದರೆ ಸರಿ. ನಿ.ಡಿ.–6 ಅನ್ನು ಜನನ ಹಾಗು ಮರಣ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಪಡೆದಿರುತ್ತೇವೆ. ಸದರಿ ಮರಣ ಪ್ರಮಾಣ ಪತ್ರವನ್ನು ದಿನಾಂಕಃ 13.01.2023 ರಂದು ಪಡೆದಿರುತ್ತೇವೆ. ಸದರಿ ಮರಣ ಪ್ರಮಾಣ ಪತ್ರವನ್ನು ಪಡೆಯುವ ಮೊದಲು ನ್ಯಾಯಾಲಯದಲ್ಲಿ ಸಿ.ಮಿಸ್. ಅರ್ಜಿ ಸಲ್ಲಿಸಿ ಸುಳ್ಳು ಮಾಹಿತಿ ನೀಡಿ ಪಡೆದುಕೊಂಡಿರುತ್ತೇವೆಂದರೆ ಸರಿಯಲ್ಲ. ಸದರಿ ಮರಣ ಪ್ರಮಾಣ ಪತ್ರದಲ್ಲಿ ಜವರಯ್ಯರವರು ಹೆಚ್.ಡಿ. ಕೋಟೆ ತಾಲ್ಲೋಕಿನ ಹಂಪಾಪುರ ಹೋಬಳಿಯ ಹಿರೇನಂದಿ ಗ್ರಾಮದಲ್ಲಿ ವಾಸವಿದ್ದುದ್ದಾಗಿ ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಹೆಂಡತಿ ಅದೇ ಗ್ರಾಮದಲ್ಲಿ ವಾಸವಿರುತ್ತಾರೆಂದು ನುಡಿಯುತ್ತಾರೆ. ಸದರಿ ಮರಣ ಪ್ರಮಾಣ ಪತ್ರದಲ್ಲಿ ಜವರಯ್ಯರವರ ತಾಯಿ ಹಾಗು ಹೆಂಡತಿಯ ಹೆಸರು ನಮೂದಿರುವುದಿಲ್ಲವೆಂದರೆ ಸರಿ. ನಿ.ಡಿ.–6 ರಲ್ಲಿ ತಿಳಿಸಿರುವ ದಿನಾಂಕಃ 09.06.1990 ರಂದು ಸದರಿ ಜವರಯ್ಯ ಮೃತಪಟ್ಟಿರುವುದಿಲ್ಲ ಹಾಗು ಅವರು ಆ ಸಮಯದಲ್ಲಿ ಸದರಿ ಮರಣ ಪ್ರಮಾಣ ಪತ್ರದಲ್ಲಿ ತಿಳಿಸಿದ ವಿಳಾಸದಲ್ಲಿ ವಾಸವಿದ್ದಿರಲಿಲ್ಲ ಎಂದರೆ ಸರಿಯಲ್ಲ. ನಿ.ಡಿ.–7 ಅನ್ನು ಭೂ–ದಾಖಲೆಗಳ ಕಛೇರಿಯಿಂದ ಪಡೆದಿರುತ್ತೇವೆ. ನಿ.ಡಿ.–7 ರ ದಾಖಲೆಗು ಹಾಗು ನಮ್ಮ ಅರಣ್ಯ ಇಲಾಖೆಗು ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.–7 ಸ.ನಂ. 6 ರ ಕಂದಾಯ ಇಲಾಖೆಗೆ ಸೇರಿದ ಜಮೀನಿಗೆ ಸಂಬಂಧಿಸಿದ ನಕಾಶೆ ಎಂದರೆ ಸರಿಯಲ್ಲ. ನಿ.ಡಿ.–7 ರಲ್ಲಿ ಸದರಿ ಸ.ನಂ. ನಲ್ಲಿ 07 ಜನರಿಗೆ ತಲಾ 04 ಎಕರೆಯಂತೆ ಜಮೀನು ಮಂಜೂರಾಗಿರುವ ಬಗ್ಗೆ ನಮೂದಿರುತ್ತದೆಂದರೆ ಸಾಕ್ಷಿಯು ಸದರಿ

ಮಂಜೂರಾತಿಯು ಅರಣ್ಯ ಇಲಾಖೆಗೆ ಸೇರಿದ 212.18 ಎಕರೆ ಜಮೀನಿಗೆ ಸಂಬಂಧಿಸಿರುವುದಿಲ್ಲವೆಂದು ನುಡಿಯುತ್ತಾರೆ. ನಿ.ಡಿ.-8 ಕಂದಾಯ ಇಲಾಖೆಗೆ ಸೇರಿದ ಜಮೀನಿಗೆ ಸಂಬಂಧಿಸಿದ ನಕಾಶೆ ಎಂದರೆ ಸರಿ. ಸದರಿ ದಾಖಲೆ 1943 ನೇ ಇಸವಿಗೆ ಸಂಬಂಧಿಸಿದ್ದು ಎಂದರೆ ಸರಿ. ನಿ.ಡಿ.-9 ರಲ್ಲಿ ಕಾಣಿಸುವ ಸಂಪೂರ್ಣ ಜಮೀನು ನಮ್ಮ ಇಲಾಖೆಗೆ ಸೇರಿದ ಜಮೀನಾಗಿರುತ್ತದೆ. ಸದರಿ ನಿ.ಡಿ.-9 ರಲ್ಲಿ ಹಸಿರು ಶಾಹಿಯಿಂದ ಕಾಣುವ ಪ್ರದೇಶವು ಸ.ನಂ. 6 ರಲ್ಲಿ ಅರಣ್ಯ ಇಲಾಖೆಗೆ ಸೇರಿದ 212.18 ಎಕರೆ ಜಮೀನು ಆಗಿರುತ್ತದೆ. ಸಿದ್ದಾಪುರ ಅರಣ್ಯ ಹಾಗು ಸೊಳ್ಳಾಪುರ ಅರಣ್ಯ ಮಧ್ಯೆ ಅಗಸನಹುಂಡಿ ಗ್ರಾಮದ ಸ.ನಂ. 6 ರ ಜಮೀನು ಬರುತ್ತದೆಂದರೆ ಸರಿ. ಸದರಿ ಸಿದ್ದಾಪುರ ಅರಣ್ಯ ಹಾಗು ಸೊಳ್ಳಾಪುರ ಅರಣ್ಯ ಮಧ್ಯೆ ಬರುವ ಅಗಸನಹುಂಡಿ ಗ್ರಾಮದ ಸ.ನಂ. 6 ರ ಜಮೀನಿಗು ನಮ್ಮ ಅರಣ್ಯ ಇಲಾಖೆಗು ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ನಿ.ಡಿ.-9 ಅನ್ನು ನಾವು ಈ ದಾವೆಗೋಸ್ಕರ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಸದರಿ ನಿ.ಡಿ.-9 ದಾಖಲೆಯನ್ನು ಅರಣ್ಯ ಇಲಾಖೆಯ ಕಾರ್ಯ ಯೋಜನೆ, ಮೈಸೂರು ಕಛೇರಿಯಿಂದ ಪಡೆದಿರುತ್ತೇವೆ. ಸದರಿ ನಿ.ಡಿ.-9 ಸೃಷ್ಟಿತ ದಾಖಲೆಯನ್ನು ಹೊರತುಪಡಿಸಿ ಸದರಿ ಜಮೀನನ್ನು ಗುರುತಿಸುವ ಬೇರೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.-10 ಕ್ಕೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗೂ ಹಾಗು ಅರಣ್ಯ ಇಲಾಖೆಗೂ ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃವಾಗಿ ಕಂದಾಯ ಇಲಾಖೆಗೆ ಸೇರಿದ ಆಸ್ತಿಗಳಾಗಿದುದ ಅದನ್ನು ಸರ್ಕಾರವು ಸಂಬಂಧಿಸಿದ ವ್ಯಕ್ತಿಗಳಿಗೆ ಮಂಜೂರಾತಿ ಮಾಡಿದ್ದು ದಾವಾ ಆಸ್ತಿಗು ಮತ್ತು ನಮ್ಮ

ಇಲಾಖೆಯ ಜಮೀನಿಗು ಯಾವುದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ಸದರಿ ಮಂಜೂರಾದ ಮಂಜೂರುದಾರ ಹಾಗು ಅವರ ಕುಟುಂಬವರು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದು ಅವರುಗಳು ದಿನಾಂಕಃ 24.01.2003, 23.12.2003 ಹಾಗು 04.09.2004 ರಂದು ವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಅದೇ ರೀತಿ ವಾದಿಯು ಕ್ರಯಕ್ಕೆ ಪಡೆದ ನಂತರ ದಾವಾ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಅವರ ಹೆಸರಿಗೆ ಬದಲಾಗಿ ಅವರೇ ಸಂಪೂರ್ಣ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿಯಲ್ಲ. ಆ ರೀತಿ ವಾದಿ ಕ್ರಯಕ್ಕೆ ಪಡೆದ ನಂತರ ಅದು ದುರಸ್ತಾಗಿ ಹೊಸ ಸ.ನಂ. 21 ರಿಂದ ಸ.ನಂ. 24 ಆಗಿ ಬದಲಾವಣೆಯಾಗಿ ಈಗಲೂ ಸಹ ವಾದಿಯ ಹೆಸರಿನಲ್ಲಿಯೇ ಕಂದಾಯ ದಾಖಲೆಗಳು ಇರುತ್ತವೆಂದರೆ ಸರಿಯಲ್ಲ. ದಾವಾ ಆಸ್ತಿಗು ಮತ್ತು ನಮ್ಮ ಇಲಾಖೆಗು ಯಾವುದೇ ಸಂಬಂಧ ಇಲ್ಲದೇ ಇದ್ದಾಗ್ಯೂ ಸಹ ವಾದಿಯ ಜಮೀನನ್ನು ಕಬಳಿಸುವ ಉದ್ದೇಶದಿಂದ ಅವರಿಗೆ ಯಾವುದೇ ನೋಟೀಸ್ ಅನ್ನು ನೀಡದೇ, ಯಾವುದೇ ಕಂದಾಯ ಹಾಗು ಅರಣ್ಯ ಇಲಾಖಾ ವತಿಯಿಂದ ಜಂಟೀ ಸರ್ವೆ ಮಾಡಿಸದೇ ತೊಂದರೆ ಕೊಡುತ್ತಿದ್ದೇವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**